ಶ್ರೀ ಹೆಚ್.ಶಿವಪ್ಪ:- ಮಾನ್ಯ ಅಧ್ಯಕ್ಷರೇ, ಈ ಕೆಲಸಕಾರ್ಯಗಳ ಬಗ್ಗೆ ಈ ಕಛೇರಿಯನ್ನು ನಾವು ಸಂಪರ್ಕ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ಯಾವುದೇ ಸಂಪರ್ಕ ಇಲ್ಲ. ಆದ್ದರಿಂದ ತಮ್ಮ ಮುಖೇನ ಮಾನ್ಯ ಮಂತ್ರಿಗಳಿಗೆ ನಾನು ಕೇಳುವುದಕ್ಕೆ ಇಚ್ಛಿಪಡುತ್ತೇನೆ, ಈ ಕಛೇರಿಗಳಿಗೆ ಏನಾದರೂ ದೂರವಾಣಿ ಸಂಪರ್ಕ ಕೊಡುತ್ತಿರೋ? ಇಲ್ಲದಿದ್ದರೆ ನಾವೇನೂ ಕೆಲಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ರಮೇಶ್ ಸಿ.ಜಿಗಜಿಣಗಿ:- ಇದು ಬಹಳ ದಿವಸಗಳಿಂದ ಬೇಡಿಕೆ ಇದೆ. ಸಬ್ ರಿಜಿಸ್ಟ್ರಾರ್ ಕಛೇರಿಗೆ ನಾನು ನನ್ನ ಕಛೇರಿಯಿಂದ ಇಂಡಿ ಸಬ್ ರಿಜಿಸ್ಟ್ರಾರ್, ಬಿಜಾಪುರ ಸಬ್ ರಿಜಿಸ್ಟ್ರಾರ್ ಅವರಿಗೆ ಮಾತನಾಡಬೇಕೆಂದರೆ ನಾನು ಎಲ್ಲೋ ಒಬ್ಬರನ್ನು ನೋಡಿ ಮಾತನಾಡಬೇಕೆಂದರೆ ಬಹಳ ಕಷ್ಟ ಇದೆ. ಈಗಾಗಲೇ ಒಂದು ಪ್ರಸ್ತಾವನೆ ಸರ್ಕಾರದ ಮುಂದೆ ಇದೆ. ದೂರವಾಣಿಯನ್ನು ಅವರಿಗೆ ಒದಗಿಸಬೇಕೆಂದು ಇದೆ. ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಅದು ಬಹಳ ಇಂಪಾರ್ಟೆಂಟ್ ಇದೆ. ಟೆಲಿಫೋನ್, ವೆಹಿಕಲ್ ಎ.ಸಿ. ಮಾಡಿಸುವುದು ಅವೆಲ್ಲಾ ಬಹಳ ಮುಖ್ಯ ಇದೆ.

ವಿಷಯ:- ಆಶ್ರಯ ಯೋಜನೆಗೆ ಬಿಡುಗಡೆಯಾದ ಹಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 161 (1252)

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1995-96 ಹಾಗೂ 96-97ನೇ ಸಾಲಿನಲ್ಲಿ ಉಡುಪಿ ಪುರಸಭೆಗೆ ಆಶ್ರಯ ಯೋಜನೆಯಲ್ಲಿ ಬಿಡುಗಡೆಯಾದ ಹಣವೆಷ್ಟು? (ವಿವರ ನೀಡುವುದು)

ಆ) 1995-96 ಹಾಗೂ 1996-97ರಲ್ಲಿ ಉಡುಪಿ ಪುರಸಭೆಗೆ ಆಶ್ರಯ ಯೋಜನೆಯಲ್ಲಿ ಕೊಟ್ಟಿರುವ ಮನೆಗಳೆಷ್ಟು? (ವಿವರ ನೀಡುವುದು)

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):-

ಅ) 1995-96ನೇ ಹಾಗೂ 1996-97ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿ ಉಡುಪಿ ಪುರಸಭೆಗೆ ಹಣ ಬಿಡುಗಡೆಯಾಗಿರುವುದಿಲ್ಲ.

ಆ) 1995-96ನೇ ಸಾಲಿನಲ್ಲಿ ಉಡುಪಿ ಪುರಸಭೆಗೆ ಆಶ್ರಯ ಯೋಜನೆಯಲ್ಲಿ 500 ಮನೆಗಳ ಗುರಿ ನೀಡಲಾಗಿದೆ. ಆರ್ಥಿಕ ದುರ್ಬಲ ವರ್ಗದವರಿಗೆ ಮನೆಗಳನ್ನು ಕಟ್ಟುವ ವಿಷಯದಲ್ಲಿ ಉಡುಪಿ ಪಟ್ಟಣದ ಪ್ರದೇಶದ ಮನೆಗಳ ಯೋಜನಾ ವರದಿ ಬಾರದೇ ಇದ್ದುದರಿಂದ, ಹುಡ್ಕೋದಿಂದ ಸಾಲ ಪಡೆಯಲು ಸಾಧ್ಯವಾಗಿರುವುದಿಲ್ಲ.

ಇದೇ ಗುರಿಯನ್ನು 1996-97ನೇ ಸಾಲಿಗೆ ಮುಂದುವರಿಸಲಾಗಿದೆ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೇ, 1995-96ರ ಸಾಲಿನಲ್ಲಿ ಉಡುಪಿ ಪುರಸಭೆಗೆ ಆಶ್ರಯ ಯೋಜನೆಯಲ್ಲಿ 500 ಮನೆಗಳ ಗುರಿಯನ್ನು ನೀಡಲಾಗಿದೆ. ಆರ್ಥಿಕ ದುರ್ಬಲ ವರ್ಗದವರಿಗೆ ಮನೆಗಳನ್ನು ಕಟ್ಟುವ ವಿಷಯದಲ್ಲಿ ಉಡುಪಿ ಪಟ್ಟಣ ಪ್ರದೇಶದ ಮನೆಗಳ ಯೋಜನಾ ವರದಿ ಬಾರದೇ ಇದ್ದುದರಿಂದ ಹುಡ್ಕೋದಿಂದ ಸಾಲ ಪಡೆಯಲು ಸಾಧ್ಯವಾಗಿರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಏನೆಂದರೆ ಯೋಜನಾ ವರದಿ ಯಾರಿಂದ ಬರಬೇಕು? ಬರದೇ ಇದ್ದರೆ ಯಾವ ಅಧಿಕಾರಿಗಳು ಇದಕ್ಕೆ ಹೊಣೆ? ಈ ಸಂದರ್ಭದಲ್ಲಿ ಆ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ಕೈಗೊಂಡಿದ್ದೀರಿ? ಅಷ್ಟೇ ಅಲ್ಲದೆ, ಅಧಿಕಾರಿಗಳ ತಪ್ಪಿನಿಂದ 95-96ರ ಸಾಲಿನಲ್ಲಿ ನಿಗಧಿಪಡಿಸಿದ 500 ಮನೆಗಳನ್ನು 96-97ರ ಸಾಲಿಗೆ ಸೇರಿಸಿಕೊಡುತ್ತೀರಾ?

+ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಸಭಾಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಪುರಸಭೆಯ ವ್ಯಾಪ್ತಿಯಲ್ಲಿ 95-96ನೇ ಸಾಲಿನಲ್ಲಿ 500 ಆಶ್ರಯ ಮನೆಗಳ ನಿರ್ಮಾಣದ ಗುರಿಯನ್ನು ನೀಡಲಾಗಿದೆ. ಈ ಪುರಸಭೆಯ ವ್ಯಾಪ್ತಿಯಲ್ಲಿ ನಿವೇಶನಗಳ ನಿರ್ಮಾಣಕ್ಕೆ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ದಕ್ಷಿಣ ಕನ್ನಡ ಜಿಲ್ಲೆಗೆ 20 ಲಕ್ಷ ರೂಪಾಯಿಗಳನ್ನು 95-96ನೇ ಸಾಲಿಗೆ ಸಂಬಂಧಿಸಿದಂತೆ ಬಿಡುಗಡೆ ಮಾಡಲಾಗಿದೆ. ಹಾಗೂ ಇದೇ ಯೋಜನೆ ಅಡಿಯಲ್ಲಿ 95-96ನೇ ಮತ್ತು 96-97ನೇ ಸಾಲುಗಳ ಆರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಉಡುಪಿ ಪುರಸಭೆಯ ವ್ಯಾಪ್ತಿಯಲ್ಲಿ ಭೂಸ್ವಾಧೀನದ ಕಾರ್ಯದಲ್ಲಿ ಯಾವುದೇ ಪ್ರಗತಿಯಾಗಿಲ್ಲ. ಭೂಮಿಯ ಬೆಲೆ ಅಧಿಕವಾಗಿದ್ದು ಇಲ್ಲಿಯವರೆಗೆ ಭೂಸ್ವಾಧೀನ ಕಾರ್ಯದಲ್ಲಿ ಪ್ರಗತಿಯಾಗಿರುವುದನ್ನು ಮನಗಂಡು ವಿಶೇಷ ಸಂದರ್ಭದಲ್ಲಿ ಬೆಲೆ ಹೆಚ್ಚಿಗೆ ಆದರೆ ಅವುಗಳನ್ನು ಪರಿಶೀಲಿಸಿ ಹೆಚ್ಚಿನ ದರದಲ್ಲಿ ಭೂಸ್ವಾಧೀನ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಇತರ ಪಟ್ಟಣಗಳು ಸೇರಿದಂತೆ ಉಡುಪಿ ಪುರಸಭೆಯ ವ್ಯಾಪ್ತಿಯಲ್ಲಿ ಭೂಸ್ವಾಧೀನ ಕೆಲಸ ಮಾಡುವ ಆಶ್ರಯ ಯೋಜನೆಯಲ್ಲಿ ಪೂರ್ಣಗೊಳಿಸುವ ಎಲ್ಲಾ ಕ್ರಮವನ್ನು ತ್ವರಿತವಾಗಿ ತೆಗೆದುಕೊಳ್ಳಲಾಗಿದೆ. ಮಾನ್ಯ ಸದಸ್ಯರು 95-96ನೇ ಸಾಲಿನಲ್ಲಿ ಮುಂದಿನ ವರ್ಷದ ಗುರಿಯನ್ನು ಈ ವರ್ಷ ಏನಾದರೂ ತೆಗೆದುಕೊಳ್ಳುತ್ತೀರೋ ಎಂದು ಕೇಳಿದ್ದಾರೆ. ಅದರ ಬಗ್ಗೆ ಅಧಿಕಾರಿಗಳನ್ನು ಕೇಳಿ ಜಿಲ್ಲಾಧಿಕಾರಿಗಳಿಂದ ಯೋಜನೆಯನ್ನು ತರಿಸಿಕೊಂಡು ನಾವು ಹುಡ್ಕೋಗೆ ಕಳಿಸಿಕೊಡುತ್ತೇವೆ. ಹುಡ್ಕೋದಲ್ಲಿ ಹಣವನ್ನು ಸಾಲದರೂಪದಲ್ಲಿ ನಿವೇಶನ ಮಾಡುವುದಕ್ಕೆ, ನಗರ ಪ್ರದೇಶಗಳಿಗೆ ಹುಡ್ಕೋ ಕಡೆಯಿಂದ ಸಾಲ ಪಡೆಯಲು ಪ್ರಯತ್ನ ಮಾಡುತ್ತಿದ್ದೇವೆ. ಜಿಲ್ಲಾಧಿಕಾರಿಗಳಿಂದ ಯೋಜನಾ ವರದಿಯನ್ನು ತರಿಸಿಕೊಂಡು ಹುಡ್ಕೋಗೆ ಕಳಿಸುತ್ತೇವೆ.

ಶ್ರೀ ಯು.ಆರ್.ಸಭಾಪತಿ:- ಸನ್ಮಾನ್ಯ ಅಧ್ಯಕ್ಷರೆ, ನನ್ನ ಸ್ಪಷ್ಟ ಪ್ರಶ್ನೆ ಏನೆಂದರೆ, ಈ ಯೋಜನಾ ವರದಿ, ಆರ್ಥಿಕವಾಗಿ ಹಿಂದುಳಿದಂತಹ ವರ್ಗದ ಜನರಿಗೆ 500 ಮನೆ

ಕೊಡಿಸುವಂತಹ ಯೋಜನೆ. ಅದು ನಮ್ಮ ಜೀವಮಾನದಲ್ಲಿಯೇ ಬಹಳ ದೊಡ್ಡ ಸಾಧನೆ. ಆದರೆ ಆ ಯೋಜನಾ ವರದಿಯನ್ನು ತರಿಸುವುದಕ್ಕೆ ತಪ್ಪಿತಸ್ಥ ಅಧಿಕಾರಿಗಳು ಯಾರು ಇದ್ದಾರೆ ಅವರ ಬಗ್ಗೆ ತಾವು ಏಕೆ ಕ್ರಮ ಕೈಗೊಳ್ಳಬಾರದು? ಅದಕ್ಕೆ ಯಾರು ಹೊಣೆಗಾರರರು? ಅದನ್ನು ದಯವಿಟ್ಟು ತಿಳಿಸಿ.

ಶ್ರೀ ಬಸವರಾಜ್:- ಒಂದು ಮನೆಗೆ 25 ಸಾವಿರ ರೂಪಾಯಿ ಕೊಟ್ಟರೆ ಬಹಳ ಅನುಕೂಲ ಎಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು:- ಈಗ 20 ಸಾವಿರ ಕೊಟ್ಟಿದ್ದಾರೆ, ಇನ್ನು ಐದು ಸಾವಿರ ಕೇಳುತ್ತಿದ್ದೀರಿ.

ಅಧ್ಯಕ್ಷರು:- ಶಿವರಾಮೇಗೌಡರ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ. ಅವರು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ.

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, 19ನೇ ಜುಲೈ 1996ರ 11ನೇಯ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 58 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ:- ಹುಬ್ಬಳ್ಳಿಗೆ ತಹಶೀಲ್ದಾರರ ನೇಮಕ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 537 (900)

ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ಶಹರ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಬ್ಬಳ್ಳಿಗೆ 3 ಜನ ತಹಶೀಲ್ದಾರ್‌ರನ್ನು ನೇಮಿಸಲು ಸರ್ಕಾರದವರಿಗೆ ಮನವಿ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿಸುವ ಕ್ರಮಗಳೇನು?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- ಧಾರವಾಡ ಜಿಲ್ಲೆಯ ಐ.ಸಿ.ಡಿ.ಎಸ್. ಯೋಜನೆಯಿಂದ ಆಹಾರ ಸರಬರಾಜು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539 (899 ಎ)